ಅನುಸಾರವಾಗಿ ಈ ಸಭೆ ಅಧೀನ ಶಾಸನ ರಚನಾ ಸಮಿತಿಗೆ ಹದಿನೈದು ಸದಸ್ಯರನ್ನು ಚುನಾಯಿಸುವುದು.

ಊ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 281(1) ನೇ ನಿಯಮದ ಅನುಸಾರವಾಗಿ ಈ ಸಭೆ ಸರ್ಕಾರಿ ಭರವಸೆಗಳ ಸಮಿತಿಗೆ ಹದಿನೈದು ಸದಸ್ಯರನ್ನು ಚುನಾಯಿಸುವುದು.

ಋ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 283(1) ನೇ ನಿಯಮದ ಅನುಸಾರವಾಗಿ ಈ ಸಭೆ ಖಾಸಗಿ ಸದಸ್ಯರ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಗೆ ಹತ್ತು ಸದಸ್ಯರನ್ನು ಚುನಾಯಿಸುವುದು.

ೠ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 286 ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ಹದಿನೈದು ಸದಸ್ಯರನ್ನು ಚುನಾಯಿಸುವುದು.

ಎ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 288ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ ಹದಿನೈದು ಸದಸ್ಯರನ್ನು ಚುನಾಯಿಸುವುದು.

ಏ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 370 (2) ನೇ ನಿಯಮದ ಅನುಸಾರವಾಗಿ ಈ ಸಭೆ ಸದನದ ಸಮಿತಿ (ವಸತಿ ಸೌಕರ್ಯಗಳ ಸಮಿತಿ) ಗೆ ಹನ್ನೆರಡು ಸದಸ್ಯರನ್ನು ಚುನಾಯಿಸುವುದು.

ಐ) 1994ನೇ ಇಸವಿಯ ಕರ್ನಾಟಕ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ಅಧಿನಿಯಮದ ಕಲಂ 21(1) (vii) ಮೇರೆಗೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಮೂರು ಸದಸ್ಯರನ್ನು ಚುನಾಯಿಸುವುದು.

ಅಧ್ಯಕ್ಷರು : ಎಲ್ಲಾ ಪ್ರಸ್ತಾವಗಳನ್ನು ಮಂಡಿಸಲಾಗಿದೆ.

12.30 ಪಿಎಂ

5) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:–

ವಿಷಯ:– (ಅ) ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಕಳ್ಳತನ

+ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ 60 ಲಕ್ಷ ಜನತೆಗೆ ಇವತ್ತು ಉಂಟಾಗಿರುವ ಆತಂಕದ ಬಗ್ಗೆ ಒಂದು ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಕಳೆದ ತಿಂಗಳು 12ನೇ ತಾರೀಖಿನಿಂದ 24ನೇ ತಾರೀಖಿನವರೆಗೂ 10 ದಿವಸ ಬೆಂಗಳೂರಿನಲ್ಲಿ ಒಂದು ವಿಚಿತ್ರವಾದಂತಹ ಕಳುವು ಆಯಿತು. ಬೆಂಗಳೂರಿನ ಕುಡಿಯುವ ನೀರು ಕಳ್ಳತನ ಆಗಿ ಹೋಯಿತು. ಬೆಂಗಳೂರಿಗೆ ಏನು ಕುಡಿಯುವ ನೀರು ಬರಬೇಕಾಗಿತ್ತು, ಅದರ ಕಳ್ಳತನ ಆಗಿ ಹೋಯಿತು. ಬೆಂಗಳೂರಿಗೆ ಪ್ರತಿ ದಿವಸ ಸುಮಾರು 360 ಕ್ಯೂಸೆಕ್ಸ್ ನೀರು ಕಬಿನಿ ಜಲಾಶಯದಿಂದ ಬರುತ್ತಿತ್ತು. ಎರಡು ದಿವಸಕ್ಕೆ ಒಂದು ಸಲ ನೀರು ಕೊಡುತ್ತಿದ್ದಾರೆ. ಅದಕ್ಕೋಸ್ಕರ 360 ಕ್ಯೂಸೆಕ್ಸ್ ನೀರು ಕಬಿನಿ ಜಲಾಶಯದಿಂದ ಬರುತ್ತಿದೆ. ಕಳೆದ ತಿಂಗಳು ಜೂನ್ 12ನೇ ತಾರೀಖಿನಿಂದ ತೊರೆಕಾಡನಹಳ್ಳಿಯಲ್ಲಿ ನೀರಿನ ಸಂಗ್ರಹದ ಮಟ್ಟ ಕಡಿಮೆ

ಆಗುತ್ತಾ ಹೋಯಿತು. ಬೆಂಗಳೂರು ಜಲ ಮಂಡಲಿಯವರಿಗೆ ಬಹಳ ಆಶ್ಚರ್ಯವಾಯಿತು, ಏಕೆ ಹೀಗೆ ನೀರು ಕಡಿಮೆ ಆಗುತ್ತಾ ಹೋಗಿದೆ ಎಂದು ಆಶ್ಚರ್ಯವಾಯಿತು. ಜಲ ಮಂಡಲಿಯವರನ್ನು ಕೇಳಿದರೆ ನಾವು ನೀರು ಬಿಟ್ಟಿದ್ದೇವೆ ಎಂದು ಹೇಳುತ್ತಾರೆ. ಏನು 500 ಕ್ಯೂಸೆಕ್ಟ್, 360 ಕ್ಯೂಸೆಕ್ಟ್ ಪ್ರಮಾಣದಲ್ಲಿ ಬಿಡಬೇಕಾಗಿತ್ತು ಆ ನೀರು ಬಿಟ್ಟಿದ್ದೇವೆಂದು ಹೇಳಿ ಕಬಿನಿ ಜಲಾಶಯದವರು ಹೇಳುತ್ತಾರೆ. ತೊರೆಕಾಡನಹಳ್ಳಿಗೆ ನೀರು ಬಂದಿಲ್ಲ. ಇದು ಹೇಗೆ ಅಂದರೆ ಹುಬ್ಬಳ್ಳಿಯಿಂದ ಹೊರಟವರು ಬೆಂಗಳೂರು ಸೇರದೇ ಇದ್ದರೆ ನಮಗೆ ಗಾಬರಿ ಆಗುತ್ತೇವೆಲ್ಲಾ ಹಾಗೆ. ಮೊನ್ನೆ ಸಂಜೆನೇ ಹುಬ್ಬಳ್ಳಿ ಬಿಟ್ಟರು ಇವತ್ತು ತಲುಪಿಲ್ಲ ಎಂದು ಗಾಬರಿ ಆದಾಗ ನಾವು ಪೋಲೀಸ್ ಠಾಣೆಗೆ ಕಂಪ್ಲೈಂಟ್ ಕೊಡಬೇಕಾದ ಪರಿಸ್ಥಿತಿ. ಕೊನೆಗೆ ಬೆಂಗಳೂರು ಜಲಮಂಡಲಿಯವರು ಸುಮಾರು 6 ತಂಡಗಳನ್ನು ರಚಿಸಿ, ಈ ನೀರು ಎಲ್ಲಿ ಹೋಗಿದೆ ಎಂದು ಕಂಡು ಹಿಡಿಯುವುದಕ್ಕೋಸ್ಕರ 6 ತಂಡಗಳನ್ನು ಬಿಟ್ಟು ಪತ್ತೆ ಮಾಡಲಿಕ್ಕೆ ಕಳುಹಿಸಿದರು. ಹುಲ್ಲಹಳ್ಳಿನಲ್ಲಿ ಒಂದು ಬ್ಯಾರೇಜ್ ಇದೆ. ಆ ಬ್ಯಾರೇಜ್‌ನ ನಾಲ್ಕೂ ಗೇಟ್‌ಗಳನ್ನು ಕ್ಲೋಸ್ ಮಾಡಿ ಬೆಂಗಳೂರಿಗೆ ಬರಬೇಕಾಗಿದ್ದಂತಹ ಕುಡಿಯುವ ನೀರನ್ನು ಇಂಪೌಂಡ್ ಮಾಡಿಕೊಂಡು ಆ ನೀರನ್ನು ಬೇರೆ ಕಡೆಗೆ ಡೈವರ್ಟ್ ಮಾಡಿದ್ದರು. ಆ ಒಂದು ವಿಚಾರ ತಿಳಿಯಿತು. ಆ ಹತ್ತು ದಿವಸ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಹಳ ಉಲ್ಬಣಗೊಂಡಿತ್ತು. ನೀರು ಸಿಗದೇ ಬಹಳ ಗಂಭೀರವಾದಂತಹ ಪರಿಸ್ಥಿತಿ ತಲುಪಿತು. ಅದಾದ ಮೇಲೆ ಮತ್ತೆ ಕಬಿನಿ ಜಲಾಶಯದಿಂದ ನೀರು ಬಿಟ್ಟರು. ಬಿಟ್ಟರೂ ಕೂಡ ಮತ್ತೆ ತೊರೆಕಾಡನಹಳ್ಳಿಗೆ ಬಂದು ಸೇರುವುದಕ್ಕೆ ನಾಲ್ಕು ದಿವಸ ಬೇಕು. ಕಬಿನಿ ಜಲಾಶಯದಿಂದ ಇಲ್ಲಿಗೆ ಬಂದು ಸೇರುವುದಕ್ಕೆ ನಾಲ್ಕು ದಿವಸ ಬೇಕು. ಇವತ್ತು ಆ ಪ್ರಸಂಗ ಇನ್ನೂ ಕೂಡ ಆ ಕಹಿ ಪ್ರಸಂಗ ಮನಸ್ಸಿನಲ್ಲಿ ಉಳಿದಿರುವಾಗ ಆಳುವ ಪಕ್ಷದ ನಾಯಕರ ಪ್ರಚೋದನೆಯಿಂದ ಆಯಿತು ಎಂದು ಸ್ಥಳೀಯ ಪೇಪರ್‌ನಲ್ಲಿ ಕೂಡ ಬಂತು. ನಿನ್ನೆ ಹೆಗ್ಗಡದೇವನ ಕೋಟೆಯಲ್ಲಿ ಕಬಿನಿ ಜಲಾಶಯದಿಂದ ಬೆಂಗಳೂರಿಗೆ ನೀರು ಬಿಡುವುದನ್ನು ವಿರೋಧಿಸಿ ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿಯ ಅಧ್ಯಕ್ಷ ಕುರುಗೂರು ಶಾಂತ ಕುಮಾರ್ ನೇತೃತ್ವದಲ್ಲಿ ಈಚನಹಳ್ಳಿ ನೀರಾವರಿ ಅಧೀಕ್ಷಕರ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು. ನಿನ್ನೆ ಆಯಿತು. ಅವರು ಎಚ್ಚರಿಕೆ ಕೊಟ್ಟಿದ್ದಾರೆ. ಇನ್ನು ಎರಡು ದಿನಗಳ ಒಳಗಾಗಿ ನೀರನ್ನು ನಿಲ್ಲಿಸದೇ ಹೋದರೆ ನಂಜನಗೂಡು, ಟಿ.ನರಸೀಪುರ ಹಾಗೂ ಚಾಮರಾಜನಗರದಿಂದ ಸಾವಿರಾರು ಸಂಖ್ಯೆಯ ರೈತರು ಆಗಮಿಸಿ ನಾವೇ ನೀರನ್ನು ನಿಲ್ಲಿಸಬೇಕಾಗುತ್ತದೆ ಎಂದು ಎಚ್ಚರಿಕೆ ಕೊಟ್ಟಿದ್ದಾರೆ. ನಾನು ಬೆಂಗಳೂರು ನಗರದ 60 ಲಕ್ಷ ನಾಗರೀಕರ ಪರವಾಗಿ ಸರ್ಕಾರವನ್ನು ಕೋರಿಕೊಳ್ಳುವುದು ಏನೆಂದರೆ ಕಳೆದ ತಿಂಗಳು ಆದ ಒಂದು ಅಹಿತಕರ ಘಟನೆ ಆಗದೇ ಇರುವ ರೀತಿ ಸರ್ಕಾರ ಎಚ್ಚರ ವಹಿಸಬೇಕು. ಏನು ಕುಡಿಯುವ ನೀರು ಇದೆ, ಅದು ಬರಬೇಕು. ಅದನ್ನು ಅನಧಿಕೃತವಾಗಿ ತಿರುಗಿಸಿಕೊಳ್ಳುವುದು ಒಂದು ರೀತಿಯ ಅರಾಜಕತೆ. ಇದು ಉಂಟಾಗುವುದಕ್ಕೆ ಸರ್ಕಾರ ಅವಕಾಶ ಕೊಡಬಾರದು. ಮತ್ತೊಮ್ಮೆ ಈ ಕಹಿ ಪ್ರಸಂಗ ಮರುಕಳಿಸದ ಹಾಗೆ ಸರ್ಕಾರ ನೋಡಿಕೊಳ್ಳಬೇಕೆಂದು ಸರ್ಕಾರದ ಗಮನಕ್ಕೆ ನಾನು ತರುತ್ತಿದ್ದೇನೆ.

ವಿಷಯ:– (ಆ) ಬಿಸಿಯೂಟದಿಂದ ರಾಜ್ಯದ ಹಲವಾರು ಕಡೆಗಳಲ್ಲಿ ಮಕ್ಕಳು ಅಸ್ವಸ್ಥರಾಗಿರುವ ಬಗ್ಗೆ

†ಶ್ರೀ ಕೆ.ಎಂ. ಕೃಷ್ಣಮೂರ್ತಿ(ಕಡೂರು) : ಮಾನ್ಯ ಸಭಾಧ್ಯಕ್ಷರೆ, ಸರ್ಕಾರ ಜುಲೈ ಒಂದರಿಂದ ಬಿಸಿ ಊಟವನ್ನು ಇಡೀ ರಾಜ್ಯದಾದ್ಯಂತ ಜಾರಿಗೆ ತಂದಿತು. ಆ ಬಿಸಿ ಊಟದ ಯೋಜನೆ ಅಡಿಯಲ್ಲಿ